ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE/EXAM0EFS/01/2025

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ: 21.03.2025.

## ಸುತ್ತೋಲೆ

ವಿಷಯ: ಏಪ್ರಿಲ್/ಮೇ 2025 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗೆ ಬೇಕಾಗಿರುವ ಲೇಖನ ಸಾಮಗ್ರಿಗಳ ಪೂರೈಕೆ ಕೆಲಸಕ್ಕಾಗಿ ನೌಕರರನ್ನು ನಿಯೋಜನೆ ಮಾಡುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: DTE/EXAM0EFS/01/2025, ದಿನಾಂಕ: 23.01.2025.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಏಪ್ರಿಲ್/ಮೇ 2025 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆ ನಡೆಸಲು ಬೇಕಾಗುವ ಅಗತ್ಯ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳ ಬೇಡಿಕೆಯನ್ನು ಕಳುಹಿಸಿಕೊಡುವಂತೆ ಉಲ್ಲೇಖಿತ ಪತ್ರದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಿಂದ ಕೋರಲಾಗಿತ್ತು. ಅದರಂತೆ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಿಂದ ಬೇಡಿಕೆ ಸಲ್ಲಿಸಿರುತ್ತಾರೆ.

ಪ್ರಯುಕ್ತ, ಅವಶ್ಯಕತೆ ಇರುವ ಮುಖ್ಯ/ಪ್ರಾಯೋಗಿಕ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳನ್ನು ಸಂಬಂಧಪಟ್ಟ ನೋಡಲ್ ಸೆಂಟರ್‌ಗಳ ಮೂಲಕ ಎಲ್ಲಾ ಸಂಸ್ಥೆಗಳಿಗೆ ಹಂತ ಹಂತವಾಗಿ ಕಳುಹಿಸಿ ಕೊಡಬೇಕಾಗಿರುತ್ತದೆ. ಇಎಫ್‌ಎಸ್ ವಿಭಾಗದ ಪರೀಕ್ಷಾ ಪೂರ್ವ ಕೆಲಸಗಳಾದ ಏಪ್ರಿಲ್/ಮೇ 2025 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆ ನಡೆಸಲು ಬೇಕಾಗುವ ಅಗತ್ಯ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳನ್ನು ಸಂಸ್ಥೆವಾರು, ಜಿಲ್ಲಾವಾರು, ನೋಡಲ್ ಸೆಂಟರ್‌ವಾರು ವಿಂಗಡಿಸಿ, ಬಂಡಲ್ ಮಾಡುವ ಕಾರ್ಯ ನಿರ್ವಹಿಸಲು ದಿನಾಂಕ: 25.03.2025 ರಿಂದ ಮುಂದಿನ ಆದೇಶದವರೆಗೂ ಈ ಕೆಳಕಂಡ ಸಿಬ್ಬಂದಿಯವರನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಸದರಿ ಅವಧಿಯನ್ನು "ಅನ್ಯ ಕರ್ತವ್ಯದ ಅವಧಿ" (ಒ.ಒ.ಡಿ) ಎಂದು ಪರಿಗಣಿಸಲಾಗುವುದು. ಸದರಿಯವರು ನಿಯಮಾನುಸಾತ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

| ಕ್ರ.ಸಂ | ಹೆಸರು ಮತ್ತು ಪದನಾಮ | ಸಂಸ್ಥೆಯ ಹೆಸರು |
|---|---|---|
| 1. | ಚನ್ನಕೇಶವ.ಬಿ, ಸಹಾಯಕರು | ಪಿ.ವಿ.ಪಿ ಪಾಲಿಟೆಕ್ನಿಕ್, ಬೆಂಗಳೂರು. |
| 2. | ರಘು.ಎಂ, ಸಹಾಯಕರು | ಆಲ್-ಖತೀಬ್ ಪಾಲಿಟೆಕ್ನಿಕ್, ಬೆಂಗಳೂರು. |
| 3. | ಪ್ರವೀಣ್‌ಕುಮಾರ್.ಹೆಚ್, ಸಹಾಯಕರು | ಪಿ.ವಿ.ಪಿ ಪಾಲಿಟೆಕ್ನಿಕ್, ಬೆಂಗಳೂರು. |
| 4. | ನಿಂಗೇಗೌಡ, ಸಹಾಯಕರು | ಡಿ.ಬನುಮಯ್ಯ ಪಾಲಿಟೆಕ್ನಿಕ್, ಮೈಸೂರು. |
| 5. | ಕೆ.ಆರ್.ರಂಗಸ್ವಾಮಿ, ಸಹಾಯಕರು | ಪಿ.ವಿ.ಪಿ ಪಾಲಿಟೆಕ್ನಿಕ್, ಬೆಂಗಳೂರು. |
| 6. | ಎಂ.ಎಸ್.ರೇವಣ್ಣ, ಗ್ರೂಪ್-ಡಿ ನೌಕರರು | ಎ.ಪಿ.ಎಸ್ ಪಾಲಿಟೆಕ್ನಿಕ್, ಸೋಮನಹಳ್ಳಿ. |
| 7. | ಜಾರ್ಜ್ ವಿಲಿಯಮ್ಸ್, ಯಾಂತ್ರಿಕರು | ಕೆ.ವಿ.ಟಿ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ. |
| 8. | ಹನುಮಂತರಾಜು.ಕೆ, ಮೆಕ್ಯಾನಿಕ್ | ಎ.ಪಿ.ಎಸ್ ಪಾಲಿಟೆಕ್ನಿಕ್, ಸೋಮನಹಳ್ಳಿ. |

**ಜಂಟಿ ನಿರ್ದೇಶಕರು (ಪರೀಕ್ಷೆ)**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು**

ಇವರಿಗೆ:

1. ಮೇಲ್ಕಂಡ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರಿಗೆ – ಮುಂದಿನ ಕ್ರಮಕ್ಕಾಗಿ.
2. ಮೇಲ್ಕಂಡ ಸಿಬ್ಬಂದಿಯವರಿಗೆ – ಪ್ರಾಂಶುಪಾಲರ ಮೂಲಕ.